**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ396 /2015 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಲಕ್ಷ್ಮಣ |
| ತಂದೆಃ ಗಂಡ | ಃ | ಮೋತಿಲಾಲ ನಾಯಕ |
| ವಯಸ್ಸು | ಃ | ೫೫ ವರ್ಷ |
| ಉದ್ಯೋಗ | : | ಸುಪಿಡೆಂಟ್ ಇಂಜಿನಿಯರ ಕೆಬಿಜೆಎನಎಲ್ |
| ವಾಸಸ್ಥಳ | ಃ | ಕೃಷ್ಣಾಪೂರ |

ದಿನಾಂಕಃ೧೨.೧೨.೨೦೨೨

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ನಾನು 2009 ರಿಂದ 2011 ರವರೆಗೆ ಅಮರ್ಜಾ ಆಣೆಕಟ್ಟು ಭೂಸನೂರನಲ್ಲಿ ಎಇಇ ಎಂದು ಕರ್ತವ್ಯ ನಿರ್ವಹಿಸಿದ್ದೆನೆ.

1995 ರಿಂದ 2000 ರದ ಇಸ್ವಿಯವರೆಗೆ ಸ್ಟಾಪಗಳ ಸ್ಯಾಲರಿ ಬಿಲ್ಲಗಳಲ್ಲಿ ಮತ್ತು ಟಿಎ ಬಿಲ್ಲಗಳಲ್ಲಿ ವ್ಯತ್ಯಾಸವಾಗಿದೆ ಟೋಕನಗಳನ್ನು ನೀಡಿದ್ದಾರೆ ಎಂದು ಅಡಿಟ ವರದಿ ಪ್ರಕಾರ ನಮಗೆ ಗೊತ್ತಾಯಿತು. ನನಗೆ ಕಾರ್ಯನಿವಾರ್ಹಕ ಅಭಿಯಂತರರು ಸರ್ಕಾರದ ಕಾರ್ಯದರ್ಶಿಗಳು ನೀರಾವರಿ ನಿಗಮ ಇವರು ನನಗೆ ಪಿರ್ಯಾದಿ ನೀಡಲು ಆದೇಶಿಸಿದ ಮೇರೆಗೆ ನಾನು ನಿಂಬರ್ಗಾ ಪೋಲಿಸ ಠಾಣೆಗೆ ಹೋಗಿ ಪಿರ್ಯಾದಿಯನ್ನು ನೀಡಿದೆನು. ಸಾಕ್ಷಿ ಪಿರ್ಯಾದಿಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ನಂ.2 ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ನಿಪಿ-1 ರಲ್ಲಿ ಅದನ್ನು ಎಲ್ಲಿ ಗಣಕಿಕೃತ ಮಾಡಿರುತ್ತದೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ನಿಪಿ-1 ನ್ನು ನಾನು ಗಣಕಿಕರಣ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-1 ನ್ನು ನಾನು ಹೇಳಿ ಗಣಕಿಕೃತ ಮಾಡಿಸಿದ್ದೆನೆ. ಮೇಲಾಧಿಕಾರಿಗಳು ನನಗೆ ನಿಪಿ-1 ನ್ನು ಗಣಕಿಕೃತ ಮಾಡಲು ಯಾವುದೇ ಮಸೂದೆಯನ್ನು ಕಳುಹಿಸಿರುವುದಿಲ್ಲ. ನಾನು ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ನಿಪಿ-1 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಿರ್ದೇಶನ ಪತ್ರಗಳನ್ನು ಪಿರ್ಯಾದಿ ಜೊತೆ ಲಗತ್ತಿರುವುದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಮೇಲಾಧಿಕಾರಿಯಿಂದ ಬಂದಿರುವ ಪತ್ರವನ್ನು ನಾನು ಪರಿಶೀಲನೆ ಮಾಡಿ ನೋಡಿಲ್ಲ ಎಂದರೆ ಸರಿ. ಮೇಲಾಧಿಕಾರಿಗಳು ನೀಡಿರುವ ಪತ್ರದ ಮೇರೆಗೆ 2 ನೇ ಆರೋಪಿ ಪರ ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ** ನಂ.3 **ಪರ** ಶ್ರೀ ಹೆಚ.ಎಸ. **ವಕೀಲರಿಂದ**

ನಾನು ನಿಪಿ-1 ರಲ್ಲಿ ಯಾವಾಗಿನಿಂದ ಕೆಲಸ ಮಾಡುತ್ತಿದ್ದೆನೆ ಎಂದು ಬರೆದಿಲ್ಲ ಎಂದರೆರ ಸರಿ ಅಲ್ಲ. ಸಾಕ್ಷಿ ಮುಂದುವರೆದು ಸುಮಾರು 2 ರಿಂದ 3 ವರ್ಷ ಕೆಲಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರು ನೀವು ಪಿರ್ಯಾದಿ ಕೊಡುವ ಕಾಲಕ್ಕೆ ಕರ್ತವ್ಯದಲ್ಲಿ ಇದ್ದರಾ ಎಂದರೆ ಸಾಕ್ಷಿಯು ಇರಬಹುದು ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದ ಎಷ್ಟು ವರ್ಷ ಎಷ್ಟು ದಿನಕ್ಕೆ ಪಿರ್ಯಾದಿ ಸಲ್ಲಿಸಿದ್ದಿರಿ ಎಂದರೆ ಸಾಕ್ಷಿಯು ಮೇಲಾಧಿಕಾರಿಗಳ ಆದೇಶದ ಮೇರೆಗೆ ಪಿರ್ಯಾದಿ ಸಲ್ಲಿಸಿದ್ದೆನೆ ಎಂದು ನುಡಿಯುತ್ತಾರೆ. ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಖೊಟ್ಟಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಪಿರ್ಯಾದಿ ಕೊಡುವ ಪೂರ್ವದಲ್ಲಿ ಆರೋಪಿತರ ವಿರುದ್ದ ಆಡಳಿತಾತ್ಮಕ ವಿಚಾರಣೆ ಮಾಡಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪಿರ್ಯಾದಿಯಲ್ಲಿ ಯಾವ ತಾರಿಕು ಯಾವ ತಿಂಗಳು ಯಾವ ದಿನ ಎಂದು ನಿಖರವಾಗಿ ಬರೆದಿಲ್ಲ ಎಂದರೆ ಸರಿ. ಯಾವ ಆರೋಪಿ ಎಷ್ಟು ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾನೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. 3 ನೇ ಆರೋಪಿ ಕೇವಲ 6 ತಿಂಗಳು ಮಾತ್ರ ಕರ್ತವ್ಯ ನಿರ್ವಹಿಸಿದ್ದಾನೆ ಅವನ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿ. 3 ನೇ ಆರೋಪಿ ಯಾವುದೇ ತಪ್ಪು ಮಾಡದಿದ್ದರು ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ನಾನು ಪಿರ್ಯಾದಿಯನ್ನು ನೀಡಿದ ನಂತರ ನನ್ನ ಮೇಲಾಧಿಕಾರಿಗಳಾಗಲಿ ತನಿಖಾಧಿಕಾರಿಗಳಾಗಲಿ ನಾನು ಭೇಟಿಯಾಗಿರುವುದಿಲ್ಲ. ಈ ಹಂತದಲ್ಲಿ ಆರೋಪಿ ನಂ.3 ರ ಪರ ವಕೀಲರು ಆರೋಪಿ ನಂ.2 ರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲು ಆರೋಪಿ** ನಂ.1 **ಪರ** ಶ್ರೀ ಬಿ.ಎಸ.ಎನ. **ವಕೀಲರಿಂದ**

ಆರೋಪಿ ನಂ.1 ರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಪರಿಶೀಲಿಸಿ ತಿರಸ್ಕರಿಸಲಾಯಿತು.

**ಮರುವಿಚಾರಣೆ :** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ